ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಪತ್ರಿಕಾಕರ್ತರಿಗೆ ಹೊಸ ಏರ್ಪಾಡು ಮಾಡಿದ್ದಾರೆಂದು ಕೇಳಿದೆ. ಅದು ತಮಗೂ ಗೊತ್ತಿದೆ. ಪತ್ರಿಕಾರಂಗದ ವಿಚಾರದಲ್ಲಿ ಮಾನ್ಯ ರಾಜ್ಯಪಾಲರೂ ಕೂಡ ಸಾಕಷ್ಟು ಭಾಷಣ ಮಾಡಿದ್ದಾರೆ. ಅವರಿಗೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುವುದು ಕೂಡ ಪ್ರಮುಖವಾದುದು. ಪತ್ರಿಕಾಕರ್ತರ ಜಾಗದಲ್ಲಿ ಅದರಲ್ಲೂ ಪ್ರಮುಖವಾಗಿ ೭೦ ಸಾವಿರ ಪತ್ರಿಕೆಗಳ ಸರ್ಕ್ಯುಲೇಷನ್ ಇರತಕ್ಕಂಥ ಉದಯವಾಣಿ ಪತ್ರಿಕೆಯ ವರದಿಗಾರರಿಗೆ ವರದಿ ಮಾಡಲು ಸ್ಥಳಾವಕಾಶ ಕಲ್ಪಿಸದಿರುವುದು ಬಹಳ ವಿಷಾದವಾಗಿರುತ್ತದೆ.

ಅಧ್ಯಕ್ಷರು.— ತಾವು ಹೇಳಿದ ತಕ್ಷಣ ಆ ಕೆಲಸ ಮಾಡಿದ್ದೇವೆ.

ಶ್ರೀ ಎಂ. ರಘುಪತಿ.—ಸ್ಥಳಾವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಪರಿಸ್ಥಿತಿ ಆಗಬಾರದು. ಇನ್ನೂ ಕೂಡ ಅನೇಕ ಪತ್ರಿಕಾ ಕರ್ತರಿಗೆ ಜಾಗ ಇರುವುದಿಲ್ಲ. ಅದನ್ನೆಲ್ಲ ಪುನರ್ ಪರಿಶೀಲನೆ ಮಾಡಬೇಕೆಂದು ಈ ಸಮಯದಲ್ಲಿ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎಂ. ರಘುಪತಿ.—ಈ ವಿಷಯವನ್ನು ಈ ಸಭೆಯಲ್ಲಿಯೇ ಪ್ರಸ್ತಾಪ ಮಾಡಬೇಕೇ ? ಅಧ್ಯಕ್ಷರ ಕೊಠಡಿಯಲ್ಲಿ ಪ್ರಸ್ತಾಪ ಮಾಡಿದ್ದರೆ ಒಳ್ಳೆಯದಿತ್ತೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಒಂದು ಪ್ರಮುಖವಾದ ವಿಚಾರ. ೭೦ ಸಾವಿರ ಸರ್ಕ್ಯುಲೇಷನ್ ಇರತಕ್ಕಂಥ ಒಂದು ಪತ್ರಿಕೆ. ಈವತ್ತಿನ ದಿವಸ ಈ ಸದನದ ಕಾರ್ಯಕಲಾಪಗಳನ್ನು ೭೦ ಸಾವಿರ ಜನಕ್ಕೆ ಓದಲಿಕ್ಕೆ ಸಾಧ್ಯವಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ೫೦ ಸಾವಿರ ಕೃಷಿ ಕಾರ್ಮಿಕರಿಗೆ ಎನ್.ಆರ್.ಇ.ಪಿ. ಅಡಿಯಲ್ಲಿ ವೇಜಸ್ ಕೊಟ್ಟಿಲ್ಲ. ಒಂದು ಕೋಟಿ ೯ ಲಕ್ಷ ರೂಪಾಯಿಂ ಗಳನ್ನು ಬಿಡುಗಡೆ ಮಾಡಬೇಕೆಂದು ಅಲ್ಲಿನ ಡಿ.ಸಿ. ಅವರು ಟೆಲೆಕ್ಸ್ ಮೆಸೇಜ್ ಕಳುಹಿಸುತ್ತಿದ್ದರೂ ಸಹ ಸರ್ಕಾರದವರು ಹತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಇದರ ಬಗ್ಗೆ ನಾನು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ.

ಅಧ್ಯಕ್ಷರು.— ಈಗ ಒಂದು ದಿನದಲ್ಲಿ ಎರಡಕ್ಕಿಂತ ಹೆಚ್ಚು ಗಮನ ಸೆಳೆಯುವ ಸೂಚನೆಯನ್ನು ಹಾಕುವಂತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸರ್ಕಾರದವರು ಅಲ್ಲಿಗೆ ಹಣ ಕಳುಹಿಸಿ ಕೊಟ್ಟರೆ ಸಾಕು.

ಅಧ್ಯಕ್ಷರು.—ತಾವು ನನಗೆ ಸೂಚನೆ ಕಳುಹಿಸಿಕೊಟ್ಟಿದ್ದೀರಿ. ಅದನ್ನು ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಇದು ಸರ್ಕಾರದ ಗಮನಕ್ಕೆ ಬಂದಿದ್ದರೆ ಉತ್ತರ ಕೊಡುತ್ತೇವೆ

ಗಮನ ಸೆಳೆಯುವ ಸೂಚನೆ

ವಿಷಯ.—(i) ಧಾರವಾಡ ಜಿಲ್ಲೆಯಲ್ಲಿ ವಿದ್ಯುತ್ ಕೊರತೆಯಿಂದ ಕೃಷಿಕರಿಗೆ ಮತ್ತು ಕಾರ್ಖಾನೆ ನೌಕರರಿಗೆ ಆಗಿರುವ ತೊಂದರೆಯ ಬಗ್ಗೆ.

ಶ್ರೀ ಕೆ.ಎಚ್. ಕಾರಡಗಿ —ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ವಿದ್ಯುತ್ ಕೊರತೆ ಯಿಂದ ಕೃಷಿಕರಿಗೆ ಮತ್ತು ಕಾರ್ಖಾನೆ ನೌಕರರಿಗೆ ಆಗಿರುವ ತೊಂದರೆಯನ್ನು ನಾನು ವಿದ್ಯುಚ್ಛಕ್ತಿ ಮತ್ತು ಅಬ್ಕಾರಿ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಜೆ.ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈಗ ವಿದ್ಯುಚ್ಛಕ್ತಿ ಸರಬರಾಜು ಮತ್ತು ಉತ್ಪತ್ತಿಯಲ್ಲಿ ವ್ಯತ್ಯಾಸವಿರುವುದರಿಂದ ಡಿಸೆಂಬರ್ ೧೯೮೩ ರಿಂದ ದಿನದ ನಿರ್ದಿಷ್ಟ ವೇಳೆಯಲ್ಲಿ ಆರು ಗಂಟೆಗಳ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಮೂರು ಗಂಟೆಗಳ ಪ್ರಕಾರ ಪಟ್ಟಣ ಪ್ರದೇಶ

ಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ. ಈಗ ನಾವು ಆಂಧ್ರ ಮತ್ತು ಮಹಾರಾಷ್ಟ್ರದಿಂದ ವಿದ್ಯುತ್‌ನ್ನು ಆಮದು ಮಾಡಿಕೊಳ್ಳುತ್ತಿದ್ದರೂಸಹ ನಮ್ಮ ರಾಜ್ಯದ ಬೇಡಿಕೆ ಹೆಚ್ಚಾಗಿರುವ ಕಾರಣದಿಂದ ವಿದ್ಯುತ್‌ನ್ನು ಕೆಲ ಸಮಯ ನಿಲ್ಲಿಸುವುದು ಅನಿವಾರ್ಯವಾಗಿದೆ. ಈ ತೊಂದರೆ ಜುಲೈ ತಿಂಗಳಲ್ಲಿ ಕಡಿಮೆಯಾಗುವುದಿದೆ. ಇದರ ಮೇಲೆ ಮಾನ್ಯ ಸದಸ್ಯರಿಗೆ ಏನಾದರು ವಿವರಗಳು ಬೇಕಾದರೆ ಕೊಡುತ್ತೇನೆ.

ಶ್ರೀ ಕೆ ಎಚ್. ಕುರಡಗಿ.—ರೈತಾಪಿ ಜನರಿಗೆ ಬೇಕಾದ ವಿದ್ಯುತ್‌ನ್ನು ೯ ತಾಸುಗಳವರೆಗೆ ನಡು ನಡುವೆ ನಿಲ್ಲಿಸಲಾಗುತ್ತಿದೆ. ಈ ರೀತಿ ನಿಲ್ಲಿಸುವುದನ್ನು ಸರಿಪಡಿಸುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ನಾನು ಈಗಾಗಲೇ ಹೇಳಿದಂತೆ ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ. ಈಗ ನಾವು ಒಂದು ದಿನದಲ್ಲಿ ೨೦.೭ ಮಿಲಿಯನ್ ಯುನಿಟ್ ವಿದ್ಯುತ್ ಬಳಸುತ್ತಿದ್ದೇವೆ. ಆದರೆ

[ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ನಮಗೆ ಬೇಕಾಗಿರುವುದು ೨೮ ಮಿಲಿಯನ್ ಯೂನಿಟ್‌ಗಳು. ಸುಮಾರು ೮ ಮಿಲಿಯನ್ ಯೂನಿಟ್ ಗಳಂ ನಮಗೆ ಕೊರತೆ ಇದೆ. ಬೇರೆ ರಾಜ್ಯಗಳಿಂದ ನಮಗೆ ಈಗ ಎರಡೂವರೆಯಿಂದ ಮೂರು ಮಿಲಿ ಯನ್ ಯೂನಿಟ್‌ಗಳವರೆಗೆ ವಿದ್ಯುತ್ ಬರುತ್ತಿದೆ. ಆದ್ದರಿಂದ ಈಗ ಧಾರವಾಡ ಜಿಲ್ಲೆಯಲ್ಲಿ ಮಾತ್ರ ವಲ್ಲ, ಇಡೀ ರಾಜ್ಯದಲ್ಲಿಯೇ ಗ್ರಾಮಾಂತರ ಪ್ರದೇಶಗಳಲ್ಲಿ ೬ ಗಂಟೆಗಳ ಪ್ರಕಾರ ವಿದ್ಯುತ್ತನ್ನು ನಿಲ್ಲಿಸುತ್ತಿದ್ದೇವೆ. ಇದರಿಂದ ಕೃಷಿಕರಿಗೆ ಮತ್ತು ಕಾರ್ಖಾನೆಗಳವರಿಗೆ ತೊಂದರೆಯಾಗುತ್ತಿದ್ದರೂ ಸಹ ಅದನ್ನು ಬಗೆಹರಿಸಲು ಯಾವುದೇ ಉಪಾಯವಿಲ್ಲ. ನಾವು ನೆನಸಿಕೊಂಡಾಗ ಇದನ್ನು ಉತ್ಪತ್ತಿ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಸಮಯ ಮತ್ತು ಯೋಜನೆಗಳು ಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ್ದು ಸರ್ಕಾರದ ಗಮನಕ್ಕೆ ಬಂದಿದೆ. ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ನಾವು ವಿದ್ಯುತ್ ಕಡಿತ ಹೆಚ್ಚು ಮಾಡಿದ್ದರೂ ಸಹ ಕೃಷಿ ಕ್ಷೇತ್ರಕ್ಕೆ ಹಾಗೂ ಔದ್ಯೋಗಿಕ ಘಟಕಗಳಿಗೆ ಈಗಿರುವ ರೀತಿಯಲ್ಲಿಯೇ ವಿದ್ಯುತ್ ಪೂರೈಸುವ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಒಂದು ಪ್ರಶ್ನೆ ಕೇಳಬೇಕಾಗಿದೆ.

ಉಪಾಧ್ಯಕ್ಷರು.—ಇದು ಧಾರವಾಡ ಜಿಲ್ಲೆಗೆ ಸಂಬಂಧಪಟ್ಟಿದ್ದು.

ಶ್ರೀ ಎಂ. ಎಸ್. ಕೃಷ್ಣನ್.—ಆದರೆ ಮಾನ್ಯ ಮಂತ್ರಿಗಳು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿದ್ದಾರೆ. ಇದಕ್ಕೂ ಮೊದಲು ಸರ್ಕಾರದವರು ಕಾರ್ಮಿಕ ಮುಖಂಡರನ್ನು ಮತ್ತು ಕೈಗಾರಿಕೋದ್ಯಮಿಗಳನ್ನು ಕರೆಸಿ ಮಾತನಾಡಿದಾಗ ನಾವು ಒಂದು ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟೆವು. ವಿದ್ಯುತ್ ಕೊರತೆಯನ್ನು ನಿವಾರಿಸುವುದು ಹೇಗೆ ಎಂಬ ಬಗ್ಗೆ ಯೋಚನೆ ಮಾಡುತ್ತಿರುವು ದಾಗಿ ಸರ್ಕಾರದವರು ಹೇಳಿದರು. ಆದರೆ ಪರಿಸ್ಥಿತಿ ಸುಧಾರಿಸದ ಕಾರಣ ಸಾಮಿಲ್‌ಗಳು ಕಾರ್ಮಿಕರು ಸಂಬಳ ಕಳೆದುಕೊಳ್ಳಬೇಕಾಗಿದೆ. ಲೇ-ಆಫ್ ಕಾರಣದಿಂದ ಕಾರ್ಮಿಕರಿಗೆ ತೊಂದರೆ ಆಗದಂತೆ ನೋಡಿ ಕೊಳ್ಳಬೇಕೆಂದು ನಾವು ಹೇಳಿದ್ದೆವು. ಇದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ? ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟರೆ ಕಾರ್ಮಿಕರಿಗೆ ಸಂತೋಷವಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಈಗಾಗಲೇ ರಾಜ್ಯದಲ್ಲಿ ಸಣ್ಣ ಉದ್ಯಮಿಗಳಿಗೆ ಮತ್ತು ಹತ್ತು ಹಾರ್ಸ್-ಪವರ್‌ಗಿಂತ ಕಡಿಮೆ ಉಪಯೋಗಿಸುವವರಿಗೆ ವಿದ್ಯುತ್ ಕಡಿತವನ್ನು ರದ್ದು ಮಾಡಿದ್ದೇವೆ. ಮತ್ತೆ ಕೆಲವು ಕಡೆ ಶೇಕಡಾ ೫೦ ರಷ್ಟು ಕಡಿತ ಇದ್ದುದನ್ನು ನಾವು ಕಡಿಮೆ ಮಾಡಿದ್ದೇವೆ. ಇದೇ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕೆಲವು ಕಾರ್ಖಾನೆಗಳು ಬಂದ್ ಆಗಬಹುದೆಂದು ಮತ್ತು ಇದರಿಂದ ಕೆಲಸಗಾರರಿಗೆ ತೊಂದರೆಯಾಗಬಹುದೆಂದುಕೊಂಡು ನಾವು ಪಕ್ಕದ ರಾಜ್ಯಗಳಿಂದ ವಿದ್ಯುತ್ತನ್ನು ಸ್ವಲ್ಪ ದುಬಾರಿ ದರದಲ್ಲಿ ಪಡೆದು ಲೇಬರ್ ಓರಿಯೆಂಟೆಡ್ ಇಂಡಸ್ಟ್ರಿಗಳಿಗೆ ಒದಗಿಸು ತ್ತಿದ್ದೇವೆ. ಹೀಗೆ ಕಾರ್ಮಿಕರಿಗೆ ಮತ್ತು ಕೃಷಿಕರಿಗೆ ತೊಂದರೆಯಾಗಬಾರದೆಂದು ಈಗಿರುವ ವ್ಯವಸ್ಥೆ ಯಲ್ಲಿ ನಮ್ಮ ಕೈಯಲ್ಲಿ ಆದುದನ್ನು ಮಾಡಿದ್ದೇವೆ.

೨–೩೦ ಪಿ. ಎಂ.

ಒಬ್ಬ ಮಾನ್ಯ ಸದಸ್ಯರು.—ವಿದ್ಯುತ್ ಕಂಬದಲ್ಲಿ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದರೆ ೧೫–೨೦ ದಿವಸಗಳಾದರೂ ಸರಿ ಮಾಡುವುದಿಲ್ಲ. ಪವರ್ ಸಪ್ಲೈ ಆಗುವುದು ನಿಂತುಹೋಗುತ್ತದೆ.

ಉಪಾಧ್ಯಕ್ಷರು.—ತಾವು ಕೇಳುವುದು ಉಪ ಪ್ರಶ್ನೆಯಾಗುತ್ತದೆ, ಈಗಾಗಲೇ ಮಂತ್ರಿಗಳು ಸಾಕಷ್ಟು ಉತ್ತರ ಕೊಟ್ಟಿದ್ದಾರೆ ಈಗ ಬೇರೆ ಪ್ರಶ್ನೆ ಎತ್ತಿಕೊಳ್ಳೋಣ.

ಮತ್ತೊಬ್ಬ ಮಾನ್ಯ ಸದಸ್ಯರು.—ರೈತರಿಗೆ ಉಂಟಾಗಿರತಕ್ಕ ತೊಂದರೆಗಳನ್ನು ಇಲ್ಲಿ ಹೇಳ ಬೇಕಾಗುತ್ತದೆ.

ಉಪಾಧ್ಯಕ್ಷರು.—ತಾವು ಪ್ರತ್ಯೇಕ ಪ್ರಶ್ನೆ ಕೇಳಿ, ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ ಬಿ ಚಿಮ್ಮನಕಟ್ಟಿ.—ಮಂತ್ರಿಗಳು ಇರತಕ್ಕ ತೊಂದರೆಗಳ ಬಗ್ಗೆ ಹೇಳಿದ್ದಾರೆ. ತೊಂದರೆ ಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ಬೇರೆ ರಾಜ್ಯಗಳಿಂದ ಪವರ್ ತರಿಸುವುದಕ್ಕೆ ಪ್ರಯತ್ನಪಟ್ಟಿ ದ್ದಾರೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಜೆ. ಎಚ್. ಪಟೇಲ್.—ಈಗಾಗಲೇ ಹೇಳಿದ್ದೇನೆ. ಮಹಾರಾಷ್ಟ್ರ, ಆಂಧ್ರಪ್ರದೇಶಗಳಿಂದ ನಾವು ವಿದ್ಯುತ್ತನ್ನು ಪಡೆಯುತ್ತಿದ್ದೇವೆ. ಪ್ರತಿ ವರ್ಷ ಈ ತರಹ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದ್ದೇವೆ. ಅದನ್ನು ತಪ್ಪಿಸುವುದಕ್ಕೋಸ್ಕರ ಶಾಶ್ವತವಾದ ಕಾರ್ಯಕ್ರಮ ಹಾಕಿಕೊಳ್ಳಲಿಕ್ಕೆ. ಯೋಜನೆಯನ್ನು ಹಾಕಿಕೊಂಡು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಮುತ್ತಿನಪೆಂಡಿಮಠ್.—ವಿದ್ಯುತ್ ಕೆಡಿತವಾಗುವುದರಿಂದ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುತ್ತಿದೆ. ಪ್ರೆಷರ್ ಕಡಿಮೆಯಾದರೆ ನೀರು ಬರುವುದಿಲ್ಲ, ನಮ್ಮಲ್ಲಿ ಕುಡಿಯುವ ನೀರಿನ ವ್ಯವಸ್ಥೆ ವಿದ್ಯುತ್ತನ್ನು ಅವಲಂಬಿಸಿಕೊಂಡಿದೆ. ಇದರ ಬಗ್ಗೆ ಮಂತ್ರಿಗಳು ಕೂಡ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ.ಎಚ್. ಪಟೇಲ್.—ಅದರ ಬಗ್ಗೆ ವಿಚಾರ ಮಾಡಲಾಗುತ್ತಿದೆ.

(ii) ವಿಷಯ.—ಸೀಮೆಎಣ್ಣೆ ಕೊರತೆಯಿಂದ ರಾಜ್ಯದ ಜನರಿಗೆ ಉಂಟಾಗಿರತಕ್ಕ ತೊಂದರೆಯ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಸೀಮೆಎಣ್ಣೆ ಕೊರತೆಯಿಂದ ರಾಜ್ಯದ ಜನರಿಗೆ ಉಂಟಾಗಿರತಕ್ಕ ತೊಂದರೆಯ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ. (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು)—ಸನ್ಮಾನ್ಯ ಉಪಾಧ್ಯಕ್ಷರೇ ಸೀಮೆಎಣ್ಣೆ ವಿತರಣೆ ಕೇಂದ್ರ ಸರ್ಕಾರದ ನೀತಿಗನುಸಾರವಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಅದರ ಬಗ್ಗೆ ಇರತಕ್ಕ ನ್ಯೂನತೆಗಳನ್ನು ಸಭೆಯ ಗಮನಕ್ಕೆ ಹೇಳಿಕೆಯ ಮುಖಾಂತರ ತರಲಿಕ್ಕೆ ಬಯಸುತ್ತೇನೆ.

೧೪–೨–೧೯೮೫ರಿಂದ ಕೇಂದ್ರ ಸರ್ಕಾರದವರು ಸೀಮೆ ಎಣ್ಣೆ ಬೆಲೆಯಲ್ಲಿ ದ್ವಿಮುಖ ನೀತಿಯನ್ನು ಜಾರಿಗೆ ತಂದಿದ್ದಾರೆ. ಈ ನೀತಿಯ ಪ್ರಕಾರ ಒಟ್ಟು ಸರಬರಾಜಾದ ಸೀಮೆ ಎಣ್ಣೆಯಲ್ಲಿ ಶೇಕಡಾ ೭೦ರಷ್ಟು ಸೀಮೆ ಎಣ್ಣೆಯನ್ನು ಕಡಿಮೆ ಬೆಲೆಯಲ್ಲೂ ಉಳಿದ ಶೇಕಡಾ ೩೦ರಷ್ಟನ್ನು ಹೆಚ್ಚಿನ ಬೆಲೆಯಲ್ಲೂ ಮಾರಾಟ ಮಾಡಬೇಕೆಂದು ಕೇಂದ್ರ ಸರ್ಕಾರದ ಆದೇಶ. ರಾಜ್ಯ ಸರ್ಕಾರ ಈ ಕೇಂದ್ರ ಸರ್ಕಾರದ ನೀತಿಯನ್ನು ಚಾಚೂ ತಪ್ಪದೆ ಜಾರಿಗೆ ತಂದಿದೆ.

೨. ದ್ವಿಮುಖ ನೀತಿಯ ಪ್ರಕಾರ ಕಡಿಮೆ ಬೆಲೆಯ ಸೀಮೆ ಎಣ್ಣೆಯ ಬೆಲೆಯನ್ನು ಲೀಟರ್ ಒಂದಕ್ಕೆ ರೂ. ೧-೮೫ ಪೈಸೆಯಂತೆಯೂ ಮತ್ತು ಹೆಚ್ಚಿನ ಬೆಲೆಯ ಸೀಮೆ ಎಣ್ಣೆಯ ಬೆಲೆಯನ್ನು ಲೀಟರ್ ಒಂದಕ್ಕೆ ರೂ. ೫-೩೨ ಪೈಸೆಯಂತೆಯೂ ನಿಗದಿ ಮಾಡಲಾಗಿತ್ತು. ಈ ಬೆಲೆಗಳು ಬೆಂಗಳೂರಿಗೆ ಮಾತ್ರ ಅನ್ವಯವಾಗಿದ್ದು, ಬೇರೆ ಬೇರೆ ಜಿಲ್ಲೆಗಳಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳು ಸಾಗಾಣಿಕೆಗೆ ತಗಲುವ ವೆಚ್ಚಕ್ಕೆ ಹೊಂದಿಕೊಂಡು ಬೆಲೆಗಳನ್ನು ನಿಗದಿ ಮಾಡಿದ್ದಾರೆ.